**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1.**

**ಸಂಖ್ಯೆ: ಸಕಾಲ 1/ 2013-14** **ದಿನಾಂಕ: 30-08-2013**

# ಸಭಾ ಸೂಚನಾ ಪತ್ರ

**ವಿಷಯ:** ಶಿಕ್ಷಣವಾಹಿನಿ ತಂತ್ರಾಂಶದ ಮೂಲಕ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ರ ಪ್ರಕಾರ 20 ಹೆಚ್ಚುವರಿ ಸೇವೆಗಳನ್ನು ರಾಜ್ಯಾದ್ಯಂತ ಪರಿಣಾಮಕಾರಿಯಾಗಿ ಹಾಗೂ ಕ್ರಮಬದ್ಧವಾಗಿ ಜಾರಿಗೊಳಿಸಲು ಕಾರ್ಯಗಾರ ಏರ್ಪಡಿಸಿರುವ ಬಗ್ಗೆ

**ಉಲ್ಲೇಖ:** ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ197 ನಾಸೇಖಾ 2012 ದಿನಾಂಕ 18-06-2013. ಹಾಗೂ 04-07-2013

ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಪ್ರಸ್ತಾಪಿಸಿದಂತೆ, ಶಿಕ್ಷಣವಾಹಿನಿ ತಂತ್ರಾಂಶದ ಮೂಲಕ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ರ ಪ್ರಕಾರ 20 ಹೆಚ್ಚುವರಿ ಸೇವೆಗಳನ್ನು ಉಪನಿರ್ದೇಶಕರ ಕಛೇರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ಹಾಗೂ ಇಲಾಖೆಯ ಇನ್ನಿತರ ಕಛೇರಿಗಳಲ್ಲಿ ಸದರಿ ಸೇವೆಗಳನ್ನು ಇಲಾಖಾ ಸರ್ಕಾರಿ ನೌಕರರಿಗೆ ನೀಡಬೇಕಾಗಿದೆ.

ಈ ಹಿನ್ನೆಲೆಯಲ್ಲಿ ನಿಮ್ಮ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆ ಹಾಗೂ ಅನುದಾನಿತ ಪ್ರಾಥಮಿಕ/ಪ್ರೌಢಶಾಲಾ/ಆಡಳಿತ ಮಂಡಳಿಯ ಮಾಹಿತಿಗಳನ್ನು ಶಿಕ್ಷಣವಾಹಿನಿ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ ದಿನಾಂಕ: **06-9-2013 ರಂದು** ಸರ್ವ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯ 3 ನೇ ಮಹಡಿಯಲ್ಲಿ ಸಭಾಂಗಣದಲ್ಲಿ ಕಾರ್ಯಗಾರವನ್ನು ಏರ್ಪಡಿಸಲಾಗಿದೆ. ಸದರಿ ಕಾರ್ಯಗಾರದಲ್ಲಿ ಶಿಕ್ಷಣವಾಹಿನಿ ತಂತ್ರಾಂಶದಲ್ಲಿ ಮಾಹಿತಿಗಳನ್ನು ಅಳವಡಿಸುವ ಬಗ್ಗೆ ಪ್ರಾತ್ಯಕ್ಷಿಕೆಯನ್ನು ನೀಡಲಾಗುವುದು ಅದರಂತೆ ನಿಮ್ಮ ಜಿಲ್ಲೆಯ ಎಲ್ಲಾ ಮಾಹಿತಿಗಳನ್ನು ಅಳವಡಿಸಬೇಕಾಗುತ್ತದೆ.

ಆದ್ದರಿಂದ ಸದರಿ ಸಭೆಗೆ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಜಿಲ್ಲಾ ಪ್ರೋಗ್ರಾಮರ್‌ಗಳು ತಪ್ಪದೇ ಹಾಜರಾಗುವುದು. ಸದರಿ ಕಾರ್ಯಗಾರಕ್ಕೆ ಹಾಜರಾಗುವಾಗ ಈ ಕೆಳಗೆ ನಮೂದಿಸಿದ ಅಂಶಗಳ ಬಗ್ಗೆ ಗಮನಹರಿಸಿ ಮಾಹಿತಿಗಳನ್ನು ತಪ್ಪದೇ ತರುವುದು. ಸದರಿ ಕಾರ್ಯವು ನಿಗಧಿತ ಅವಧಿಯೊಳಗೆ ಮುಗಿಸಬೇಕಾಗಿರುವುದರಿಂದ, ತಂತ್ರಾಂಶಕ್ಕೆ ಅಳವಡಿಸಬೇಕಾಗಿರುವ ಮಾಹಿತಿಯನ್ನು ನಮೂನೆ-1 ಹಾಗೂ ನಮೂನೆ-2 ರಲ್ಲಿದಂತೆ ತರುವುದು ಯಾವುದೇ ಕಾರಣಕ್ಕೂ ಕಾರ್ಯಗಾರಕ್ಕೆ ತಂದಿರುವ ಮಾಹಿತಿಗಳು ಅಪೂರ್ಣವಾಗಿರಬಾರದು. ಆಯಾ ಜಿಲ್ಲಾ ಉಪನಿರ್ದೇಶಕರು, ನೋಡಲ್ ಅಧಿಕಾರಿಗಳು ಮಾಹಿತಿಗಳನ್ನು ನಿಗಧಿತ ಅವಧಿಯಲ್ಲಿ ಅಳವಡಿಸಬೇಕಾದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಹೊಂದಿರುತ್ತಾರೆ. ತಪ್ಪಿದ್ದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮವಹಿಸಲಾಗುವುದು.

1. ಸಭೆಗೆ ಹಾಜಾರಾಗುವ ಪ್ರೋಗ್ರಾಮರ್‌ಗಳು ಲ್ಯಾಪ್ ಟಾಪ್ ಹಾಗೂ ಡೇಟಾ ಕಾರ್ಡ್‌ನ್ನು ತಪ್ಪದೇ ತರುವುದು.

2. ಸಭೆಗೆ ಹಾಜರಾಗುವಾಗ ಇದರೊಂದಿಗೆ ಲಗತ್ತಿಸಿದ ನಮೂನೆಗಳಲ್ಲಿ ನಿಮ್ಮ ಜಿಲ್ಲೆಯ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲೆ ಹಾಗೂ ಅನುದಾನಿತ ಪ್ರಾಥಮಿಕ/ಪ್ರೌಢಶಾಲಾ/ಆಡಳಿತ ಮಂಡಳಿಯ ಮಾಹಿತಿಗಳನ್ನು ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯ ಮಾಹಿತಿಯನ್ನು ತರುವುದು.

3. ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್‌ಗಳು ಜೊತೆಗೂಡಿ ತಮ್ಮ ಜಿಲ್ಲೆಯ ಮಾಹಿತಿಗಳನ್ನು ಶಿಕ್ಷಣವಾಹಿನಿ ತಂತ್ರಾಂಶದಲ್ಲಿ ದಿನಾಂಕ:10-09-2013 ರೊಳಗೆ ಪೂರ್ಣಗೊಳಿಸತಕ್ಕದ್ದು. (ಸದರಿ ತಂತ್ರಾಂಶವನ್ನು ದಿನಾಂಕ:11-09-2013ರಿಂದ ಸ್ಥಗಿತಗೊಳಿಸಲಾಗುವುದು)

ಅಪರ ಆಯುಕ್ತರು (ಆಡಳಿತ)(ಪ್ರಭಾರಿ)
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ನೀಡಿದೆ.
2. ಸಹ ನಿರ್ದೇಶಕರು (ಆಡಳಿತ) ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರು, ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು (ಆಡಳಿತ), ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
4. ಉಪ ನಿರ್ದೇಶಕರು (ಪ್ರಾಥಮಿಕ) ಹಾಗೂ ಸಕಾಲ ರಾಜ್ಯ ನೋಡಲ್ ಅಧಿಕಾರಿಗಳು ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸದರೊ ಕಾರ್ಯಗಾರಕ್ಕೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ.
5. ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ಘಟಕ ಬೆಂಗಳೂರು ಇವರು ಸದರಿ ಕಾರ್ಯಗಾರಕ್ಕೆ ಎಲ್ಲಾ ರೀತಿಯ ತಾಂತ್ರಿಕ ವ್ಯವಸ್ಥೆಯನ್ನು ಮಾಡಿಕೊಳ್ಳುವುದು.
6. ಅಧೀಕ್ಷಕರು, ಆಡಳಿತ-2 ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
7. ಪತ್ರಾಂಕಿತ ವ್ಯವಸ್ಥಾಪಕರು, ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರು, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ದಿನಾಂಕದಂದು ಕಾರ್ಯಗಾರಕ್ಕೆ ಹಾಜರಾಗುವ ಸುಮಾರು 50 ಜನಕ್ಕೆ ಕಾಫಿ ಹಾಗೂ ಊಟದ ವ್ಯವಸ್ಥೆಯನ್ನು ಮಾಡಲು ತಿಳಿಸಿದೆ.
8. ಕಛೇರಿ ಪ್ರತಿ

ಜಿಲ್ಲೆಯ ಹೆಸರು

ನಮೂನೆ -1

ತಾಲ್ಲೂಕಿನ ಹೆಸರು

**ಶಿಕ್ಷಣವಾಹಿನಿ ಮೂಲಕ ಸಕಾಲ ಪತ್ರ ಮತ್ತು ಕಡತ ನಿರ್ವಹಣಾ ವ್ಯವಸ್ಥೆ ತಂತ್ರಾಂಶದಲ್ಲಿ ಅಳವಡಿಸಬೇಕಾದ ಅಧಿಕಾರಿ ಸಿಬ್ಬಂದಿ ವೈಯಕ್ತಿಕ ಮಾಹಿತಿ**

| ಕ್ರ ಸಂ | ಶಾಲೆಯ ಹೆಸರು | ಡೈಸ್ ಕೋಡ್ | ಪದನಾಮ | ಹೆಸರು | ಪ್ರಥಮ ಕೆ ಜಿ ಐ ಡಿ ಪಾಲಿಸಿ ಸಂಖ್ಯೆ | ಹುಟ್ಟಿದ ದಿನಾಂಕ | ಲಿಂಗ (ಹೆ/ ಗಂ) | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | ಸದರಿ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ | ವೈಯಕ್ತಿಕ ಇ-ಮೇಲ್ ವಿಳಾಸ | ದೂರವಾಣಿ ಸಂಖ್ಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | GHS, KRISHNA PURA | 29210224915 | ಮುಖ್ಯ ಶಿಕ್ಷಕರು | ಶಿವಪ್ರಸಾದ್ | 123456 | 10/12/1980 | ಗಂ | 12/11/2002 | 12/1/1999 | psasadkt@gmail.com | 9448934251 |
| | | | | | | | | | | | |

ಜಿಲ್ಲೆಯ ಹೆಸರು

ನಮೂನೆ -2

ತಾಲ್ಲೂಕಿನ ಹೆಸರು

| ಕ್ರಸಂ | ಶಾಲೆಯ ಹೆಸರು | ಡೈಸ್ ಕೋಡ್ | ಶಾಲೆಯಲ್ಲಿ ಹಾಲಿ ಇರುವ | | | | ಶಾಲೆಯಲ್ಲಿ ಸುಸ್ಥಿತಿಯಲ್ಲಿ ಇರುವ | | | | ಷರಾ |
|---|---|---|---|---|---|---|---|---|---|---|---|
| | | | ಗಣಕಯಂತ್ರಗಳು | ಬ್ಯಾಟರಿ ಬ್ಯಾಂಕ್ ಗಳು | ಯುಪಿಎಸ್ | ಪ್ರಿಂಟರ್ | ಗಣಕಯಂತ್ರಗಳು | ಬ್ಯಾಟರಿ ಬ್ಯಾಂಕ್ | ಯುಪಿಎಸ್ | ಪ್ರಿಂಟರ್ | |
| 1 | GHS, KRISHNA PURA | 29210224915 | 05 | 01 | 01 | 01 | 03 | 0 | 0 | 0 | |
| | | | | | | | | | | | |